(ಶ್ರೀ ಟಿ. ಸಿದ್ದಲಿಂಗಯ್ಯನವರು).

information just now. I may be permitted to read it out to the House. ತಾವು ಹಿಂದೆ ಕೇಳಿದ ಪ್ರಶ್ನೆಗೆ ಜವಾಬು.—

1947—48ರಲ್ಲಿ	19,050	ರೂಪಾಯಿಗಳು.
1948—49ರಲ್ಲಿ	14 100	,,
1949—50ರಲ್ಲಿ	46,511	,,
1950—51ರಲ್ಲಿ	86,000	,,
1951—52ರಲ್ಲಿ	14,000	,,

ಇಷ್ಟು ಹಣ ಮಂಜೂರಾಗಿದೆ.

ಶ್ರೀ ಕೆ. ಲಕ್ಕಪ್ಪನವರು.—ಈ ಯೋಜನೆ ಪ್ರಕಾರ ಅರ್ಹತೆ (ಕ್ವಾಲಿಫಿಕೇಷನ್) ಇರುವವರಿಗೆ ಸಹಾಯ ಮಾಡುತ್ತಿದ್ದೀರೋ ಅಥವಾ ಎಲ್ಲರಿಗೂ ಮಾಡುತ್ತಿದ್ದೀರೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಿರುದ್ಯೋಗಿಗಳು ಎಂಬುದೊಂದು, ವಿದ್ಯಾವಂತರು ಎಂಬುದು ಎರಡನೆಯದು—ಈ ಎರಡು ಅರ್ಹತೆಗಳಿರುವವರಿಗೂ ಸಹಾಯ ಮಾಡಬೇಕೆಂದು ಗೊತ್ತುಮಾಡಿದೆ.

ಶ್ರೀ ಕೆ. ಲಕ್ಕಪ್ಪನವರು.—ಹೆಣ್ಣು ಮಕ್ಕಳು, ಗಂಡ ಮಕ್ಕಳು—ಎಲ್ಲರಿಗೂ ಸಹಾಯ ಮಾಡುತ್ತಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು, ಅದರಲ್ಲಿ ಲಿಂಗ ಭೇದವಿಲ್ಲ.

Sri H. C. LINGA REDDY (Malur).—Is it not a fact that the unemployment problem becomes more acute with the retrenchment policy that the Government are pursuing ?

Mr. SPEAKER.—That does not arise out of this question.

Accumulation of stocks of goods manufactured in Spun Silk Factory at Channapatna.

Q.—497. **Sri G. PAPANNA** (Sidlaghatta—Chikballapur).—

Will the Government be pleased to state :—

The reason for the accumulation of stocks of goods manufactured in Spun Silk Factory at Channapatna ?

A.—**Sri T. SIDDALINGAIYA** (Minister for Industries).—

The Spun Silk Factory at Channapatna is a Joint-Stock concern over which Government have no direct control and no information concerning matters relating to that Company can be furnished by Government.

ಶ್ರೀ ಜಿ. ಪಾಪಣ್ಣನವರು—ಈ ಸ್ಪನ್ ಸಿಲ್ಕ್ ಕಾರ್ಖಾನೆಯ ಚೇರ್ಮನ್ ಸರ್ಕಾರಿ ಅಧಿಕಾರಿಯಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಜಿ. ಪಾಪಣ್ಣನವರು.—ಈ ಕಾರ್ಖಾನೆಯಲ್ಲಿ ಸರ್ಕಾರದ ಷೇರು ಎಷ್ಟಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 2½ ಲಕ್ಷ ರೂಪಾಯಿಗಳಷ್ಟು ಇದೆ.

ಶ್ರೀ ಜಿ. ಪಾಪಣ್ಣನವರು.—ಈ ಕಂಪೆನಿಗೆ ಸಂಬಂಧಪಟ್ಟ ಯಾವ ವಿವರವನ್ನೂ ಸರ್ಕಾರದವರು ಒದಗಿಸಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಇದರ ಹಣಕಾಸಿನ ಸ್ಥಿತಿ ಹೇಗಿದೆಯೆಂದು ತಿಳಿದುಕೊಳ್ಳಬಹುದೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಿಳಿದುಕೊಳ್ಳಬಹುದು.

ಶ್ರೀ ಜಿ. ಪಾಪಣ್ಣನವರು.—ಈ ಕಂಪೆನಿ ಲಾಭದಲ್ಲಿದೆಯೆ ಅಥವಾ ನಷ್ಟದಲ್ಲಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಲಾಭದಲ್ಲಿಯೇ ಇದೆ.

ಶ್ರೀ ಜಿ. ಪಾಪಣ್ಣನವರು.—ಲಾಭ ನಷ್ಟದ ತಖ್ತೆ ಪ್ರತಿ ವರ್ಷವೂ ತಮಗೆ ಬರುತ್ತದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬರುತ್ತದೆ.

ಶ್ರೀ ಜಿ. ಪಾಪಣ್ಣನವರು.—ಲಾಭ ನಷ್ಟ ತಿಳಿದುಕೊಳ್ಳುವಾಗ ಸ್ಟಾಕ್ ಎಷ್ಟಿದೆ ಎಂಬ ವಿವರ ಕಳುಹಿಸುವುದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲವೂ ಬರುತ್ತದೆ.

ಶ್ರೀ ಜಿ. ಪಾಪಣ್ಣನವರು.—ಹಾಗಾದರೆ ಏಕೆ ತಿಳಿಸಬಾರದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಪಬ್ಲಿಕ್ ಮಾಡತಕ್ಕ ಪದ್ಧತಿ ಸರಿಯಿಲ್ಲ. ಕಾರಣ ಅದು ಜಾಯಿಂಟ್ ಸ್ಟಾಕ್ ಕಂಪೆನಿ.

Legislation for relief of agricultural labour.

Q.—55. **Sri T. HANUMIAH** (Hiriyur—Scheduled Castes).—

Will the Government be pleased to state :—

(*a*) Whether they have thought of introducing any Bill for the relief of agricultural labour in the State ;

(*b*) Whether they intend fixing minimum wages to an agriculturist just as it is done in the case of an industrial labourer ;

(*c*) the living index of an agricultural labourer ;

(*d*) his average earning per day in the State ;

(*e*) their proposal to ameliorate the conditions of agricultural labourers ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Yes. Action is being taken to fix minimum wages in the case of agricultural labour.